3. ಅಧ್ಯಕ್ಷರ ಅಪ್ಪಣೆ ಮೇರೆಗೆ

ಅ) ವಿಷಯ:– ರಾಜ್ಯದ ಗಡಿಯನ್ನು ತಮಿಳುನಾಡಿನವರು ಆಕ್ರಮಿಸಿಕೊಂಡಿರುವ ಬಗ್ಗೆ

ಅಧ್ಯಕ್ಷರು : ಈಗ ಒಂದು ಪ್ರಶ್ನೆ ನಮ್ಮ ಮುಂದಿದೆ. ಇವೊತ್ತು ಮಧ್ಯಹ್ನ ಏನೆ ಆಗಲಿ 2 ಗಂಟೆಗೆ ಮುಗಿಸಬೇಕು. ಮ್ಯಾಕ್ಸಿಮಮ್ ಎಂದರೂ 2–30 ಗಂಟೆಗೆ ಕ್ಲೋಸ್ ಮಾಡಬೇಕಾಗಿದೆ. 2–30 ಕ್ಕೆ ಚರ್ಚೆ ಮುಗಿಸಿ ಸೋಮವಾರದ ದಿವಸ ರಿಪ್ಲೈಗೆ ತೆಗೆದುಕೊಳ್ಳೋಣ. ಇವೊತ್ತು ಶೂನ್ಯ ವೇಳೆ ಮತ್ತು ಈ ಎರಡೂ ಗಮನ ಸೆಳೆಯುವ ಸೂಚನೆಗಳಿವೆ. ಅದನ್ನು ಸೋಮವಾರ ತೆಗೆದುಕೊಳ್ಳೋಣ ಎಂದು ನನ್ನ ಸೆಜೆಶನ್. ಏಕೆಂದರೆ ಮಾತನಾಡುವವರು ಇನ್ನೂ ಬಹಳ ಜನರು ಇದ್ದಾರೆ.

ಶ್ರೀ ಹೆಚ್.ಎಸ್. ಮಹದೇವ್‌ಪ್ರಸಾದ್ : ಮಾನ್ಯ ಅಧ್ಯಕ್ಷರೆ, ನಿನ್ನೆಯ ದಿನ ಶೂನ್ಯ ವೇಳೆಯಲ್ಲಿ ರಾಜ್ಯದ ಗಡಿಯನ್ನು ಆಕ್ರಮಿಸಿರುವ ಬಗ್ಗೆ ಪ್ರಸ್ತಾಪ ಮಾಡಿದ್ದೆ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ನಾನು ಮೂರು ದಿವಸಗಳಿಂದ ಒಂದು ವಿಷಯ ಪ್ರಸ್ತಾಪ ಮಾಡಲು ಕಾಯುತ್ತಿದ್ದೇನೆ.

ಅಧ್ಯಕ್ಷರು : ಇವೊತ್ತು ಬೇಡಿ. ಸೋಮವಾರದ ದಿನ ಡೆಫನೆಟ್ಲಿ ತೆಗೆದುಕೊಳ್ಳೋಣ.

ಶ್ರೀ ಆರಗ ಜ್ಞಾನೇಂದ್ರ : ಎರಡು ನಿಮಿಷದಲ್ಲಿ ನಾನು ಮೆನ್‌ಶನ್ ಮಾಡಿಬಿಡುತ್ತೇನೆ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ : ನಿನ್ನೆಯ ದಿನ ಪ್ರಸ್ತಾಪ ಮಾಡಿದಾಗ ಇವೊತ್ತು ಉತ್ತರ ಕೊಡುತ್ತೇವೆ ಎಂದು ಹೇಳಿದ್ದರು.

ಅಧ್ಯಕ್ಷರು : ಸೋಮವಾರ ಕೊಡುತ್ತಾರೆ ಬಿಡಿ.

ಶ್ರೀ ಎ.ಎಸ್. ಗುರುಸ್ವಾಮಿ : ಮಾನ್ಯ ಅಧ್ಯಕ್ಷರೆ, ನನ್ನದೊಂದು ಖಾಸಗಿ ನಿರ್ಣಯ 28ನೇ ಏಪ್ರಿಲ್ 2000ನೇ ಇಸವಿಯಲ್ಲಿ ಮೂವ್ ಆಗಿ ಈಗ 2003ನೇ ಇಸವಿಗೆ ಬಂದರೂ ಕೂಡ ಇನ್ನೂ ಇದರ ಬಗ್ಗೆ ಚರ್ಚೆಯೇ ಆಗಿಲ್ಲವೆಂದರೆ ನಾವು ಕಳುಹಿಸಿದ್ದಕ್ಕೆ ಏನು ಬೆಲೆ ಅಧ್ಯಕ್ಷರೆ? ಚರ್ಚೆಗೆ ಅವಕಾಶವೇ ಆಗುವುದಿಲ್ಲವೆಂದರೆ ಸದಸ್ಯರ ಹಕ್ಕು ಮೊಟಕು ಮಾಡಿದಂತಾಗುವುದಿಲ್ಲವೆ? ಅವಕಾಶ ಮಾಡಿಕೊಡಬೇಕು ಅಧ್ಯಕ್ಷರೆ.

ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ: (ಆ) ಹಕ್ಕುಚ್ಯುತಿ ಪ್ರಸ್ತಾಪ

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಸದಸ್ಯನಾದ ನನ್ನ ಹಕ್ಕಿನ ಪ್ರಶ್ನೆ ಇದು. ತಾವು ಅಧ್ಯಕ್ಷರಾಗಿ ಇದನ್ನು ಪ್ರಸ್ತಾಪ ಮಾಡಲು ಎರಡು ನಿಮಿಷಗಳ ಕಾಲ ನನಗೆ ಅವಕಾಶ ಕೊಡದಿದ್ದರೆ ನಾವು ಇನ್ನು ಎಲ್ಲಿ ಹೋಗಿ ಕೇಳಬೇಕು. ಎಲ್ಲಿ ಹೋಗಿ ಕೇಳಬೇಕು ಹೇಳಿ ತಾವು.. ಎರಡೇ ನಿಮಿಷ. ನಾನೇನೂ ಭಾಷಣ ಮಾಡುವುದಿಲ್ಲ.

ಅಧ್ಯಕ್ಷರು : ಈಗ ಅವರು ಏನು ಹೇಳುತ್ತಾರೆಂದರೆ ಯಾವುದೇ ಪ್ರೋಗ್ರಾಂನ್ನು ಸೋಮವಾರ ತೆಗೆದುಕೊಳ್ಳಿ ಎಂದು ಹೇಳಿದ್ದಾರೆ. ನಿಮಗೂ ಹಕ್ಕು ಇದ್ದ ಹಾಗೆ ಬೇರೆಯವರಿಗೂ